# All India Radio: Bangalore
# National Bulletin In Kannada
# 22.11.2025  19.35 p.m.
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು
## 22.11.2025  19.35 p.m.

****************

ಮುಖ್ಯಾಂಶಗಳು

1. **ಜಿ–20 ಶೃಂಗಸಭೆ: ಜಾಗತಿಕ ಅಭಿವೃದ್ಧಿ ನಿಯತಾಂಕಗಳನ್ನು ಪುನರ್ ವಿಮರ್ಶಿಸಲು, ಸುಸ್ಥಿರ ಬೆಳವಣಿಗೆಗೆ ಆದ್ಯತೆ ನೀಡುವಂತೆ ಪ್ರಧಾನಿ ಕರೆ**
2. **ಹಜ್ ಯಾತ್ರಿಕರಿಗೆ ಬಾಕಿ ಇರುವ ಶೇಕಡ 75 ರಷ್ಟು ಹಣವನ್ನು ತಕ್ಷಣವೇ ಮರುಪಾವತಿಸಲು ಅಲ್ಪಸಂಖ್ಯಾತ ಸಚಿವಾಲಯ ಸೂಚನೆ**
3. **56ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಇಫ್ಫಿ 2025ರ ಸಂದರ್ಭದಲ್ಲಿ, ಚಲನಚಿತ್ರಗಳ ಕುರಿತ ಮೂರು ಒಡಂಬಡಿಕೆಗಳಿಗೆ ಸಹಿ**
4. **ಟಿ–20 ಮಹಿಳಾ ಅಂಧರ ವಿಶ್ವಕಪ್ ಕ್ರಿಕೆಟ್: ಫೈನಲ್‌ಗೆ ಲಗ್ಗೆ ಇಟ್ಟ ಭಾರತದ ವನಿತೆಯರು**

****************

ಜಿ–20 ಶೃಂಗಸಭೆಯನ್ನು ಆಫ್ರಿಕಾ ಮೊದಲ ಬಾರಿಗೆ ಆಯೋಜಿಸುತ್ತಿರುವುದರಿಂದ ಜಾಗತಿಕ ಅಭಿವೃದ್ಧಿ ನಿಯತಾಂಕಗಳನ್ನು ಪುನರ್ ವಿಮರ್ಶಿಸಲು ಮತ್ತು ಸಮಗ್ರ, ಸುಸ್ಥಿರ ಬೆಳವಣಿಗೆಗೆ ಆದ್ಯತೆ ನೀಡಲು ಇದು ಸರಿಯಾದ ಸಮಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್‌ನಲ್ಲಿ ಇಂದು ನಡೆದ ಜಿ–20 ಶೃಂಗಸಭೆಯ ಮೊದಲ ಅಧಿವೇಶನದಲ್ಲಿ ಮಾತನಾಡಿದ ಅವರು, ಇದು ಸಮಗ್ರ ಮತ್ತು ಸುಸ್ಥಿರ ಬೆಳವಣಿಗೆಯ ಮೇಲೆ ಕೇಂದ್ರೀಕರಿಸಿದೆ ಎಂದರು.

ಶೃಂಗಸಭೆಯಲ್ಲಿ, 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ದೃಷ್ಟಿಕೋನದ ಆಧಾರದ ಮೇಲೆ ನಾಲ್ಕು ಪ್ರಮುಖ ಪ್ರಸ್ತಾಪಗಳನ್ನು ಅವರು ಮಂಡಿಸಿದರು.

ಜಿ–20 ಅಡಿಯಲ್ಲಿ ಜಾಗತಿಕ ಸಾಂಪ್ರದಾಯಿಕ ಜ್ಞಾನ ಭಂಡಾರವನ್ನು ಸ್ಥಾಪಿಸುವ ಪ್ರಸ್ತಾಪವನ್ನು ಅವರು ಮಂಡಿಸಿದರು. ಭಾರತೀಯ ಜ್ಞಾನ ವ್ಯವಸ್ಥೆಗಳ ಮೇಲೆ ನಿರ್ಮಿಸಲಾದ ಈ ಉಪಕ್ರಮವು ಸಾಂಪ್ರದಾಯಿಕ

ಜ್ಞಾನದ ಜಾಗತಿಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಭವಿಷ್ಯದ ಪೀಳಿಗೆಗೆ ಮಾನವೀಯತೆಯ ಸಾಮೂಹಿಕ ಬುದ್ಧಿವಂತಿಕೆಯನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ.

ಭಾರತದ ನಾಗರಿಕ ಮೌಲ್ಯಗಳು, ವಿಶೇಷವಾಗಿ ಮಾನವತಾವಾದದ ತತ್ವವು ಈ ಹಾದಿಯಲ್ಲಿ ಅರ್ಥಪೂರ್ಣ ಮುನ್ನಡೆಯನ್ನು ನೀಡುತ್ತದೆ. ಆರೋಗ್ಯ ತುರ್ತು ಪರಿಸ್ಥಿತಿಗಳು ಹಾಗೂ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಜಗತ್ತು ಒಟ್ಟಾಗಿ ಕೆಲಸ ಮಾಡಿದಾಗ ಬಲಿಷ್ಠಗೊಳ್ಳುತ್ತದೆ ಎಂದ ಪ್ರಧಾನಿ, ಜಿ–20 ಜಾಗತಿಕ ಆರೋಗ್ಯ ರಕ್ಷಣಾ ಪ್ರತಿಕ್ರಿಯೆ ತಂಡವನ್ನು ರಚಿಸುವ ಪ್ರಸ್ತಾಪ ಮಂಡಿಸಿದರು.

ಯಾವುದೇ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ತ್ವರಿತ ನಿಯೋಜನೆಗೆ ಸಿದ್ಧರಾಗಿರುವ ಸಹವರ್ತಿ ಜಿ–20 ರಾಷ್ಟ್ರಗಳಿಂದ ತರಬೇತಿ ಪಡೆದ ವೈದ್ಯಕೀಯ ತಜ್ಞರ ತಂಡಗಳನ್ನು ರಚಿಸುವುದು ಅವರ ಪ್ರಯತ್ನವಾಗಿರಬೇಕು. ಮಾದಕ ವಸ್ತು ಕಳ್ಳ ಸಾಗಣೆ, ವಿಶೇಷವಾಗಿ ಫೆಂಟನಿಲ್ ನಂತಹ ಅಪಾಯಕಾರಿ ವಸ್ತುಗಳ ಹರಡುವಿಕೆಯ ಹೆಚ್ಚುತ್ತಿರುವ ಸವಾಲನ್ನು ನಿಭಾಯಿಸಲು, ಮಾದಕ ವಸ್ತು ಭಯೋತ್ಪಾದನಾ ಸಂಬಂಧವನ್ನು ಎದುರಿಸಲು ಜಿ–20 ಉಪಕ್ರಮವನ್ನು ಪ್ರಧಾನಿ ಪ್ರಸ್ತಾಪಿಸಿದರು.

ಶೋಚನೀಯ ಮಾದಕ ವಸ್ತು ಭಯೋತ್ಪಾದನಾ ಆರ್ಥಿಕತೆಯನ್ನು ದುರ್ಬಲಗೊಳಿಸಲು ಸದಸ್ಯ ರಾಷ್ಟ್ರಗಳು ಒಂದಾಗಬೇಕೆಂದು ಕರೆ ನೀಡಿದರು.

ಮುಂದಿನ ದಶಕದಲ್ಲಿ ಆಫ್ರಿಕಾದಲ್ಲಿ ಒಂದು ದಶಲಕ್ಷ ಪ್ರಮಾಣೀಕೃತ ತರಬೇತುದಾರರನ್ನು ಸಿದ್ಧಪಡಿಸುವ, ಸ್ಥಳೀಯ ಸಾಮರ್ಥ್ಯ ಮತ್ತು ದೀರ್ಘಕಾಲೀನ ಅಭಿವೃದ್ಧಿಯನ್ನು ಹೆಚ್ಚಿಸುವ 'ಜಿ–20 ಆಫ್ರಿಕಾ–ಕೌಶಲ್ಯ ಗುಣಕ ಉಪಕ್ರಮ'ವನ್ನು ಪ್ರಧಾನಿ ಈ ಸಮಯದಲ್ಲಿ ಪ್ರಸ್ತಾಪಿಸಿದರು.

****************

ಜೊಹಾನ್ಸ್‌ಬರ್ಗ್‌ನಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯ ಸಂದರ್ಭದಲ್ಲಿ ಯು.ಕೆ ಪ್ರಧಾನಿ ಕೀರ್ ಸ್ಟಾರ್ಮರ್ ಅವರನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಭೇಟಿ ಮಾಡಿದರು.

ಯು.ಕೆ ಪ್ರಧಾನಿ ಅವರ ಭೇಟಿ ಸಂತಸ ತಂದಿದೆ ಎಂದು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ. ಈ ವರ್ಷ ಭಾರತ–ಯುಕೆ ಪಾಲುದಾರಿಕೆಗೆ ನವ ಚೈತನ್ಯ ಬಂದಿದ್ದು, ಉಭಯ ದೇಶಗಳು ಅದನ್ನು ಎಲ್ಲಾ ಕ್ಷೇತ್ರಗಳಲ್ಲಿ ಮುಂದುವರೆಸಲು ಪ್ರಯತ್ನಿಸಲಿವೆ ಎಂದು ಅವರು ಹೇಳಿದ್ದಾರೆ.

****************

ಮುಂಬೈನಲ್ಲಿ ನಡೆದ ಹಜ್ ಸಮಿತಿ ಸಭೆಯಲ್ಲಿ ಹಜ್ 2026ಕ್ಕೆ ಭಾರತೀಯ ಯಾತ್ರಿಕರ ಅನುಭವವನ್ನು ಮತ್ತಷ್ಟು ಸುವ್ಯವಸ್ಥಿತಗೊಳಿಸುವ ಕ್ರಮಗಳ ಕುರಿತು ಸಮಿತಿಯು ಚರ್ಚೆ ನಡೆಸಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಡಾ.ಚಂದ್ರಶೇಖರ್ ಕುಮಾರ್, ಹಜ್ ಯಾತ್ರಿಕರಿಗೆ ಬಾಕಿ ಇರುವ ಎಲ್ಲ ಬಾಕಿಗಳ ಶೇಕಡ 75 ರಷ್ಟು ಹಣವನ್ನು ತಕ್ಷಣವೇ ಮರುಪಾವತಿಸುವಂತೆ ಮತ್ತು ಉಳಿದ ಶೇಕಡ 25 ರಷ್ಟು ಹಣವನ್ನು ಪರಿಶೀಲನೆಯ ನಂತರ ಬಿಡುಗಡೆಗೊಳಿಸುವಂತೆ ಹಜ್ ಸಮಿತಿಗೆ ಸೂಚಿಸಿದರು.

****************

ಗೋವಾದಲ್ಲಿ ನಡೆಯುತ್ತಿರುವ 56ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ–ಇಫ್ಫಿ 2025ರ ಸಂದರ್ಭದಲ್ಲಿ ಮೂರು ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು.

ಚಿತ್ರೋತ್ಸವಗಳ ವಿನಿಮಯ ಸಹಭಾಗಿತ್ವ, ಚಿತ್ರ ನಿರ್ಮಾಣ ಪ್ರಯೋಗಾಲಯಗಳು, ಪ್ರತಿಭೆಗಳ ಅಭಿವೃದ್ಧಿ ಕುರಿತಾದ ಒಪ್ಪಂದಗಳಿಗೆ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಮಂಡಳಿ, ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮ ಮತ್ತು ಮೆಲ್ಬೋರ್ನ್ ಭಾರತೀಯ ಚಿತ್ರೋತ್ಸವ ಮಂಡಳಿಗಳ ನಡುವೆ ಸಹಿ ಹಾಕಲಾಯಿತು.

ಇದಲ್ಲದೇ, ಚಲನಚಿತ್ರೋತ್ಸವದ ಅಂಗವಾಗಿ 16 ರಾಜ್ಯಗಳ ವಿವಿಧ ಜಾನಪದ ಕಲಾ ಪ್ರಕಾರಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಇಂದು ಹಿಮಾಚಲ ಪ್ರದೇಶ, ತಮಿಳುನಾಡು ಮತ್ತು ಜಮ್ಮು–ಕಾಶ್ಮೀರದ ಕಲಾವಿದರು ವರ್ಣರಂಜಿತ ಜಾನಪದ ನೃತ್ಯ ಪ್ರಸ್ತುತಿಗಳೊಂದಿಗೆ ಪ್ರೇಕ್ಷಕರನ್ನು ರಂಜಿಸಿದರು.

ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಕುರಿತ ವಿಶೇಷ ಸಂವಾದ ಕಾರ್ಯಕ್ರಮವು ಆಕಾಶವಾಣಿಯಲ್ಲಿ ಇಂದು ರಾತ್ರಿ 8.15 ರಿಂದ 8.45 ರವರೆಗೆ ಪ್ರಸಾರವಾಗಲಿದೆ.

****************

ಈ ವರ್ಷ ಇಲ್ಲಿಯವರೆಗೆ ಭಾರತೀಯ ರೈಲ್ವೆಯು 1 ಸಾವಿರದ 20 ದಶಲಕ್ಷ ಟನ್ ಸರಕು ಸಾಗಣೆಯನ್ನು ಪೂರ್ಣಗೊಳಿಸಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಇದರಲ್ಲಿ ಕಲ್ಲಿದ್ದಲು 500 ದಶಲಕ್ಷ ಟನ್‌ಗಳಿಂತ ಹೆಚ್ಚಿನ ಕೊಡುಗೆ ನೀಡುತ್ತಿದ್ದು, ದ್ವಿತೀಯ ಸ್ಥಾನದಲ್ಲಿ ಕಬ್ಬಿಣದ ಅದಿರು 115 ದಶಲಕ್ಷ ಟನ್ ಮತ್ತು ಮೂರನೇ ಸ್ಥಾನದಲ್ಲಿ ಸಿಮೆಂಟ್ 92 ದಶಲಕ್ಷ ಟನ್‌ಗಳಷ್ಟು ಕೊಡುಗೆ ನೀಡುತ್ತಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

****************

ನಾಗರಿಕರ ಜೀವನವನ್ನು ಸುಧಾರಿಸಲು ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ರಾಷ್ಟ್ರದ ಅಭಿವೃದ್ಧಿಗೆ ಜನರ ಕೌಶಲ್ಯ ಮತ್ತು ಶಕ್ತಿಯನ್ನು ಬಳಸಿಕೊಳ್ಳಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರ ಜನ್ಮ ಶತಮಾನೋತ್ಸವ ಸ್ಮರಣಾರ್ಥ ಪುಟ್ಟಪರ್ತಿಯ ಪ್ರಶಾಂತಿ ನಿಲಯದಲ್ಲಿ ಇಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿಯಲ್ಲಿ ಸಾಮೂಹಿಕ ಭಾಗವಹಿಸುವಿಕೆಗೆ ಕರೆ ನೀಡಿದ ಅವರು, ಆಧ್ಯಾತ್ಮಿಕ ಸಂಸ್ಥೆಗಳು ಸರ್ಕಾರೇತರ ಸಂಸ್ಥೆಗಳು, ಖಾಸಗಿ ವಲಯ ಮತ್ತು ನಾಗರಿಕರು ಎಲ್ಲರೂ ಪ್ರಮುಖ ಪಾತ್ರವಹಿಸಬೇಕಾಗಿದೆ ಎಂದು ಹೇಳಿದರು.

**ಧ್ವನಿ : ರಾಷ್ಟ್ರಪತಿ ದ್ರೌಪದಿ ಮುರ್ಮು (32 ಸೆಕೆಂಡುಗಳು)**

****************

ಗೋವಾ ರಾಜ್ಯದ ಕಾಣಕೋಣ ಬಳಿಯ ಪರ್ತಗಾಳಿ ಮಠಕ್ಕೆ ಇದೇ ತಿಂಗಳ 28ರಂದು ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿದ್ದು, ಅಲ್ಲಿ ನೂತನವಾಗಿ ನಿರ್ಮಿಸಿರುವ 77 ಅಡಿ ಎತ್ತರದ ಶ್ರೀರಾಮನ ಕಂಚಿನ ಪ್ರತಿಮೆಯನ್ನು ಅನಾವರಣ ಮಾಡಲಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕಾರ್ಯಕ್ರಮದ ಸಂಯೋಜಕ, ಉದ್ಯಮಿ ಪ್ರದೀಪ ಪೈ, ನವೆಂಬರ್ 28ರ ಮಧ್ಯಾಹ್ನ 3.30 ರಿಂದ ಸಾಯಂಕಾಲ 5 ಗಂಟೆಯವರೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಾರ್ಯಕ್ರಮ ನಡೆಯಲಿದೆ. ಅವರು ಈ ಸಂದರ್ಭದಲ್ಲಿ ರಾಮನ ಮೂರ್ತಿಯನ್ನು ಅನಾವರಣ ಮಾಡುವರು. ರಾಮಾಯಣ ಥೀಮ್ ಪಾರ್ಕ್ 3ಡಿ ಯೋಜನೆಯನ್ನು ಸಹ ಅವರು ಅನಾವರಣ ಮಾಡುವರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಲಿದ್ದಾರೆ.

ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಅವರ ದಿವ್ಯ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮಗಳು ನಡೆಯಲಿದೆ ಎಂದು ಪೈ ತಿಳಿಸಿದ್ದಾರೆ.

****************

ಕೊಲಂಬೋದಲ್ಲಿ ಇಂದು ನಡೆದ ಆಸ್ಟ್ರೇಲಿಯಾ ವಿರುದ್ಧದ ಮೊದಲ ಟಿ–20 ಮಹಿಳಾ ಅಂಧರ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಫೈನಲ್ ತಲುಪಿದೆ.

ಆಸ್ಟ್ರೇಲಿಯಾ ನೀಡಿದ 110 ರನ್‌ಗಳ ಗುರಿಯನ್ನು ಬೆನ್ನತ್ತಿದ ಭಾರತ 11.5 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 112 ರನ್ ಗಳಿಸಿ ಜಯ ತನ್ನದಾಗಿಸಿಕೊಂಡಿತು.

****************

ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ–ದಕ್ಷಿಣ ಆಫ್ರಿಕಾ ಎರಡನೇ ಮತ್ತು ಅಂತಿಮ ಟೆಸ್ಟ್‌ನ ಮೊದಲ ದಿನದಾಟದ ಅಂತ್ಯಕ್ಕೆ  ದಕ್ಷಿಣ ಆಫ್ರಿಕಾ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 6 ವಿಕೆಟ್ ಕಳೆದುಕೊಂಡು 247 ರನ್ ಗಳಿಸಿದೆ.

ಟಾಸ್ ಗೆದ್ದು ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅತಿಥೇಯರ ಪರ, ಕುಲ್‌ದೀಪ್ ಯಾದವ್ ಮೂರು ವಿಕೆಟ್‌ಗಳನ್ನು ಕಬಳಿಸಿದರೆ, ಮೊಹಮ್ಮದ್ ಸಿರಾಜ್ ಮತ್ತು ರವೀಂದ್ರ ಜಡೇಜಾ ತಲಾ ಒಂದು ವಿಕೆಟ್ ಪಡೆದರು.

ಭಾರತ ಟೆಸ್ಟ್ ತಂಡದ ನಿಯಮಿತ ನಾಯಕ ಶುಭ್‌ಮನ್ ಗಿಲ್ ಕುತ್ತಿಗೆ ಗಾಯದ ಕಾರಣ ಪಂದ್ಯದಿಂದ ಹೊರಗುಳಿದಿದ್ದು, ಅವರ ಅನುಪಸ್ಥಿತಿಯಲ್ಲಿ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ತಂಡವನ್ನು ಮುನ್ನಡೆಸುತ್ತಿದ್ದಾರೆ.

****************

ಪಾಕಿಸ್ತಾನ ಗುಪ್ತಚರ ಸಂಸ್ಥೆ–ಐಎಸ್‌ಐ ಜೊತೆ ಸಂಪರ್ಕ ಹೊಂದಿರುವ ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ಕಳ್ಳಸಾಗಣೆದಾರರ ಜಾಲವನ್ನು ದೆಹಲಿ ಪೊಲೀಸರು ಭೇದಿಸಿದ್ದು, ನಾಲ್ವರು ಶಂಕಿತರನ್ನು ಬಂಧಿಸಿದ್ದಾರೆ.

ಟರ್ಕಿಯಲ್ಲಿ ತಯಾರಾದ ಐದು ಮತ್ತು ಚೀನಾದಲ್ಲಿ ತಯಾರಾದ ಮೂರು ಸೇರಿದಂತೆ 10 ಅತ್ಯಾಧುನಿಕ ಪಿಸ್ತೂಲುಗಳನ್ನು, ಕಾರ್ಯಾಚರಣೆಯಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

*******ಮುಕ್ತಾಯ*******